**<u>ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ  ನ್ಯಾಯಾಧೀಶರ ನ್ಯಾಯಾಲಯ ,</u>**
**<u>ಉಡುಪಿ ಜಿಲ್ಲೆ , ಉಡುಪಿ</u>**

<u>ಸ್ಪೆಷಲ್   ಕೇಸ್ ನಂಃ 56/2023</u>  <u>ಪಿ.ಡಬ್ಲ್ಯೂಃ 2</u>

<u>ಸಿ.ಡಬ್ಲ್ಯೂಃ 3</u>

| | |
|---|---|
| ಸಾಕ್ಷಿದಾರರ ಹೆಸರು | ಫ್ರಾಂಕ್ಲಿನ್ ಅಲ್ಮೆಡಾ |
| ತಂದೆಯ ಹೆಸರು | ಫ್ರಾನ್ಸಿಸ್ ಅಲ್ಮೆಡಾ |
| ವಯಸ್ಸು | 51  ವರ್ಷ |
| ಉದ್ಯೋಗ | ವ್ಯಾಪಾರ |
| ವಿಳಾಸ | ಕೆಮ್ಮಣ್ಣು |

ದಿನಾಂಕಃ 28-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**<u>ಮುಖ್ಯ ವಿಚಾರಣೆಃ  ಸರಕಾರಿ ಅಭಿಯೋಜಕರಿಂದ</u>**

1) ಚಾಸಾ-4 ನನ್ನ ಹೆಂಡತಿ.  ನನಗೆ ಸೇರಿದ ವೆಲಂಕಣಿ ಸ್ಟೋರ್ಸ್ ಎಂಬ ದಿನಸಿ ಅಂಗಡಿ ಬಡನಿಡಿಯೂರು ಗ್ರಾಮದ ಸನ್ಯಾಸಿ ಮಠ ಎಂಬಲ್ಲಿ  ಇದೆ.  ಆ ಅಂಗಡಿಯನ್ನು ನಾನು ಕಳೆದ 5 ವರ್ಷಗಳಿಂದ ನಡೆಸುತ್ತಿದ್ದೇನೆ.  ನನ್ನ ಮನೆ ಅಂಗಡಿಯಿಂದ ಸುಮಾರು 100 ಮೀಟರ್ ಗಳ ಅಂತರದಲ್ಲಿದೆ.  ಅಂಗಡಿಯನ್ನು ಬೆಳಿಗ್ಗೆ 7.00 ಗಂಟೆಗೆ ಆರಂಭಿಸಿ ರಾತ್ರಿ 9.00 ಗಂಟೆಗೆ ಮುಚ್ಚುತ್ತೇನೆ.  ನಮ್ಮ ಅಂಗಡಿಗೆ ಸಿ.ಸಿ ಟಿವಿಯನ್ನು ಅಳವಡಿಸಿದ್ದೇನೆ.

2) ನನಗೆ ಚಾಸಾ-1 ಪರಿಚಯ.  ಅವರು ನನ್ನ ಅಂಗಡಿಗೆ ಬರುತ್ತಿದ್ದರು.  ಚಾಸಾ-1,  2023 ರ ಸಾಲಿನಲ್ಲಿ ಒಂದು ದಿನ ತಾರೀಕು, ತಿಂಗಳು ನೆನಪಿಲ್ಲ, ಸಂಜೆ 7.00 ಗಂಟೆಯ ನಂತರ ನನ್ನ ಅಂಗಡಿಯ ಹಿಂಬಾಗಿಲಿನಿಂದ ಒಳಗೆ ಬಂದಿದ್ದರು.  ನಂತರ ಇಬ್ಬರು ವ್ಯಕ್ತಿಗಳು ಅಂಗಡಿಯ ಮುಂಬಾಗಿಲಿನಿಂದ ನನ್ನ ಅಂಗಡಿಯ ಒಳಗೆ ಬಂದಿದ್ದರು.  ಅವರು ಚಾಸಾ-1 ಈತನನ್ನು ಹಿಡಿದು, ಹೊಡೆದು, ಹೊರಗೆ ಎಳೆದುಕೊಂಡು ಹೋಗಿದ್ದರು.  ಅಲ್ಲಿಂದ ಚಾಸಾ-1 ಈತನನ್ನು ಅವರು ಹಂಪನಕಟ್ಟೆಗೆ ಕರೆದುಕೊಂಡು ಹೋಗಿದ್ದರು ಎಂದು ತಿಳಿದಿತ್ತು. ಅಲ್ಲಿಯೂ ಸಹ ಚಾಸಾ-1 ಈತನಿಗೆ

ಹಲ್ಲೆ ಮಾಡಿದ್ದರು ಎಂದು ತಿಳಿದಿತ್ತು. ಆ ಘಟನೆಗೆ ಸಂಬಂಧಪಟ್ಟಂತೆ ಚಾಸಾ-1 ಕೊಟ್ಟ ದೂರಿನ ಮೇಲೆ ಕೇಸು ದಾಖಲಾಗಿದ್ದ ಬಗ್ಗೆ ಗೊತ್ತು.

3) ಪೊಲೀಸರು ಮಾರನೇ ದಿನ ಬಂದು ನನ್ನನ್ನು ವಿಚಾರಿಸಿದ್ದರು. ಪೊಲೀಸರು ಅಲ್ಲಿ ಬಂದು ಪಂಚನಾಮೆ ಮಾಡಿದ್ದರು. ಪೊಲೀಸರು ನನ್ನ ಅಂಗಡಿಯ ಸಿಸಿ ಟಿವಿ ದ್ರಶ್ಯಾವಳಿಗಳನ್ನು ಕೇಳಿದ್ದರು. ಅವುಗಳನ್ನು ನನ್ನ ಲ್ಯಾಪ್ ಟಾಪ್ ಮೂಲಕ ಸಿಡಿಗೆ ಹಾಕಿಕೊಂಡು, ಆ ಸಿಡಿಯನ್ನು ಪೊಲೀಸರಿಗೆ ಕೊಟ್ಟಿದ್ದೆ. ಆ ಸಿಡಿಯನ್ನು ಪೊಲೀಸರಿಗೆ ಘಟನೆಯಾದ ಒಂದು ತಿಂಗಳ ನಂತರ ನೀಡಿದ್ದೆ. ಪೊಲೀಸರು ನಾನು ಕೊಟ್ಟ ಸಿಡಿಯನ್ನು ಪ್ಲೇ ಮಾಡಿ ನೋಡಿದ್ದರು. ಆ ಸಮಯದಲ್ಲಿ ನನ್ನೊಂದಿಗೆ ಚಾಸಾ-1, 9, 10 ಸಹ ಇದ್ದರು. ಆದಿನ ನಾನು ನೀಡಿದ್ದ ಸಿಡಿಯಲ್ಲಿಯ ದ್ರಶ್ಯಾವಳಿ ಸುಮಾರು 3 ನಿಮಿಷದ್ದು ಆಗಿತ್ತು. ಆ ಸಿಡಿಯನ್ನು ವಶಪಡಿಸಿಕೊಂಡಾಗ ಪಂಚನಾಮೆ ಸಹ ಮಾಡಿದ್ದರು. ಅದಕ್ಕೆ ನಾನು ಸಹಿ ಮಾಡಿದ್ದೆ. ಈಗ ಪಂಚನಾಮೆಯನ್ನು ನೋಡಿ ಅದರಲ್ಲಿಯ ನನ್ನ ಸಹಿಯನ್ನು ಈಗ ನೋಡಿ, ಪಂಚನಾಮೆಯನ್ನು ನಿಶಾನೆ ಪಿ-8 , ಸಹಿಯನ್ನು **ನಿಶಾನೆ ಪಿ-8(ಬಿ)** ಎಂದು ಗುರುತಿಸಿದ್ದೇನೆ. ಆಗ ತೆಗೆದಿದ್ದ ಎರಡು ಪೋಟೋಗಳನ್ನು ಈಗ ನೋಡಿ **ನಿಶಾನೆ ಪಿ -12** ಎಂದು ಗುರುತಿಸಿದೆ. ನಿಪಿ-8 ರ ಅಡಿಯಲ್ಲಿ ಕೊಟ್ಟಿದ್ದ ಸಿಡಿಯನ್ನು ಈಗಾಗಲೇ ಎಂಒ-1 ಎಂದು ಗುರುತಿಸಿದ್ದು, ಅದಕ್ಕಾಗಿ ಕೊಟ್ಟ ದೃಢೀಕರಣ ಪತ್ರವನ್ನು ಈಗ ನೋಡಿ ಅದನ್ನು **ನಿಶಾನೆ ಪಿ-13** ಎಂದು, ಅದರಲ್ಲಿರುವ ನನ್ನ ಸಹಿಯನ್ನು **ನಿಶಾನೆ ಪಿ-13(ಎ)** ಎಂದು ಗುರುತಿಸಿದ್ದೇನೆ.

4) ಚಾಸಾ-1 ಅಂಗಡಿಗೆ ಬಂದಾಗ ಅಂಗಡಿಯಲ್ಲಿ ನಾನು ಮತ್ತು ಚಾಸಾ-4 ಸಹ ಇದ್ದರು. ಆ ದಿನ ಅಂಗಡಿಯ ಒಳಗೆ ಬಂದಿದ್ದ ವ್ಯಕ್ತಿಗಳನ್ನು ಹೊರಗೆ ಹೋಗಲು ಹೇಳಿದ್ದೆ. ಆ ದಿನದ ಘಟನೆಯಾದ ನಂತರ ನಾನು ಚಾಸಾ-1 ಇವರನ್ನು ಭೇಟಿಯಾಗಿಲ್ಲ. ಆದಿನ ನನ್ನ ಅಂಗಡಿಗೆ ಬರುವ ಪೂರ್ವದಲ್ಲಿ ಚಾಸಾ-1 ಈತನಿಗೆ ತೊಟ್ಟಂ ಬೀಚ್ ಬಳಿ ಹಲ್ಲೆ ಮಾಡಿದ್ದರು ಎಂದು ತಿಳಿದಿತ್ತು. ಆದಿನ ಅಂಗಡಿಯ ಒಳಗೆ ಬಂದಿದ್ದ ವ್ಯಕ್ತಿಗಳಲ್ಲಿ ಒಬ್ಬ 1 ನೇ ಆರೋಪಿ, ಇನ್ನೊಬ್ಬ ಹುಡುಗನ ಹೆಸರು ಗೊತ್ತಿಲ್ಲ. ಅವನನ್ನು ನೋಡಿದರೆ ಗುರುತಿಸಬಲ್ಲೆ.

5) ಎಂಒ-1ರ ದ್ರಶ್ಯಾವಳಿಗಳನ್ನು ನೋಡಿದರೆ ಗುರುತಿಸಬಲ್ಲೆ. ನಾನು ಈಗ ನೋಡಿದ ದ್ರಶ್ಯಾವಳಿಗಳು ನನ್ನ ಅಂಗಡಿಯ ಸಿಸಿ ಟಿವಿಯ ದ್ರಶ್ಯಾವಳಿಗಳು ಆಗಿದೆ. ಆ ದ್ರಶ್ಯಾವಳಿಗಳಲ್ಲಿ ಇದ್ದ 1ನೇ ಅರೋಪಿ ಮತ್ತು ಆತನೊಂದಿಗೆ ಇದ್ದ ಇನ್ನೊಬ್ಬ ಹುಡುಗನನ್ನು ನೋಡಿ ಗುರುತಿಸಿದ್ದೇನೆ. ಆತನ ಹೆಸರು ಗೊತ್ತಿಲ್ಲ. ಆ ದ್ರಶ್ಯಾವಳಿಗಳಲ್ಲಿ 1 ನೇ ಆರೋಪಿ ಮತ್ತು ಇನ್ನೊಬ್ಬ ವ್ಯಕ್ತಿ ನನ್ನ ಅಂಗಡಿಯ ಒಳಭಾಗಕ್ಕೆ ಬಂದು, ಚಾಸಾ-1 ಈತನನ್ನು ಹೊರಗೆ ಬಾ, ಹೊರಗೆ ಬಾ ಎಂದು ಕರೆದು, ನಂತರ ಒಳಗೆ ಹೋಗಿ, ಆತನಿಗೆ ಹಲ್ಲೆ ಮಾಡಿ, ಚಾಸಾ-1 ಈತನನ್ನು ನನ್ನ ಅಂಗಡಿಯಿಂದ ಹೊರಗೆ ಎಳೆದುಕೊಂಡು ಹೋಗಿದ್ದರು. ಆ ಸಮಯದಲ್ಲಿ ಚಾಸಾ-9, 10, 12, 13, ಇವರು ಬಂದು ಬಿಡಿಸಲು ಪ್ರಯತ್ನಿಸಿದ್ದರು. ಆ ಸಮಯದಲ್ಲಿ ಚಾಸಾ-9, 10, 12, 13 ಅಲ್ಲದೇ ಇನ್ನೂ ಬೇರೆ ಜನರು ಸಹ ಇದ್ದರು.

6) ಆದಿನ ಚಾಸಾ-1 ಈತನನ್ನು ಎಷ್ಟು ಜನ ಅಟ್ಟಿಸಿಕೊಂಡು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಆದಿನ ಚಾಸಾ-1 ಈತನನ್ನು ಬೈಕ್ ನಲ್ಲಿ ಕರೆದುಕೊಂಡು ಹೋಗಿದ್ದ ಜನರು ಯಾರು ಎಂದು ಗೊತ್ತಿಲ್ಲ. ಆದಿನ ಚಾಸಾ-1 ಈತನನ್ನು ಕರೆದುಕೊಂಡು ಹೋಗಿದ್ದ ಉಳಿದ 3 ಜನ ಯಾರು ಎಂದು ಗೊತ್ತಿಲ್ಲ. ಪೊಲೀಸರು ನನಗೆ ಉಳಿದ ಆರೋಪಿತರನ್ನು ತೋರಿಸಿಲ್ಲ.

**( ಈ ಹಂತದಲ್ಲಿ ಸರಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಸರಕಾರಿ ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**ಪಾಟಿಸವಾಲು: ಸರಕಾರಿ ಅಭಿಯೋಜಕರಿಂದ:**

7) ತಾರೀಕು 16-06-2023ರಂದು ಚಾಸಾ-1 ಈತನನ್ನು ಬೀಚ್ ನಲ್ಲಿ ಆರೋಪಿತರು ಮತ್ತು ಉಳಿದ ಮೂರು ಹುಡುಗರು ಹಲ್ಲೆ ಮಾಡಿ, ಜಾತಿ ನಿಂದನೆ ಮಾಡಿ, ಅತನನ್ನು ಅಟ್ಟಿಸಿಕೊಂಡು ಬಂದಾಗ, ಆತ ನಮ್ಮ ಅಂಗಡಿಯ ಹಿಂಭಾಗದಲ್ಲಿ ಅವಿತು ಕುಳಿತು, ಆರೋಪಿತರು ಅಲ್ಲಿಗೂ ಬಂದಾಗ, ಚಾಸಾ-1 ಹಿಂದಿನ ಬಾಗಿಲಿನಿಂದ ಅಂಗಡಿಯ ಒಳಗೆ ಬಂದಿದ್ದ ಎಂದರೆ ನಿಜ. ಚಾಸಾ-1 ಈತನನ್ನು ಹೊರಗೆ ಕರೆದುಕೊಂಡು ಹೋದಾಗ ಅಲ್ಲಿ ಇದ್ದ ಉಳಿದ 4 ಜನರು ಸಹ ಹಲ್ಲೆ ಮಾಡಿದ್ದರು

ಎಂದರೆ ನಿಜ. ಅಲ್ಲಿದ್ದ 1 ನೇ ಆರೋಪಿ ಹಾಗೂ ಶಶಾಂಕ್ ಬಾಪುತೋಟ ಎಂಬ ಬಾಲಪರಾಧಿ ಚಾಸಾ-1 ಇವರ ವಾಹನದಲ್ಲಿ ಆತನನ್ನು ಅಪಹರಿಸಿ, ಹಂಪನಕಟ್ಟೆಗೆ ಕರೆದುಕೊಂಡು ಹೋಗಿದ್ದರು ಎಂದರೆ ನಿಜ.

8) ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿ, ಮತ್ತು ಉಳಿದ ಮೂರು ಜನ ಹುಡುಗರನ್ನು ನಾನು ಡಿ.ವೈ.ಎಸ್‌ಪಿ ಕಚೇರಿಯಲ್ಲಿ ತಾರೀಕು 21-07-2023 ರಂದು ನೋಡಿ ಗುರುತಿಸಿದ್ದೆ ಎಂದರೆ ನೆನಪಿಲ್ಲ. ಅದಕ್ಕಾಗಿ ಈಗ ಓದಿದ ಹೇಳಿಕೆಯನ್ನು ಸಹ ನೀಡಿದ್ದೆ ಎಂದರೆ, ನೆನಪಿಲ್ಲ. ಸದರಿ ಹೇಳಿಕೆಯನ್ನು **ನಿಶಾನೆ ಪಿ-14** ಎಂದು ಗುರುತಿಸಿದೆ. ಆದಿನ ನನ್ನ ಅಂಗಡಿಯ ಒಳಗೆ ಬಂದಿದ್ದ ಆರೋಪಿತರು ನನ್ನ ಅಂಗಡಿಯ ಗ್ರಾಹಕರು ಎಂದರೆ ಸರಿಯಲ್ಲ. 1 ನೇ ಆರೋಪಿ ಮಾತ್ರವೇ ಗ್ರಾಹಕ. ನನಗೆ 2 ನೇ ಆರೋಪಿ ಮತ್ತು ಉಳಿದ ಬಾಲಕರ ಪರಿಚಯ ಇದ್ದು, ಅವರನ್ನು ಡಿ.ವೈ.ಎಸ್ಪಿ ಕಚೇರಿಯಲ್ಲಿ ಗುರುತಿಸಿದ್ದರೂ ಸಹ ಈಗ ಅವರಿಗೆ ಸಹಾಯವಾಗಲೀ ಎಂದು ಗುರುತಿಸಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿತರ ಪರವಾಗಿ ಪಾಟೀಸವಾಲು: ಶ್ರೀ ಎಸ್.ಎ. ವಕೀಲರಿಂದ**

1) ಎಂ.ಒ-1 ರ ಸಿಡಿಯ ದ್ರಶ್ಯಾವಳಿಯಲ್ಲಿ ಚಾಸಾ-1 ಈತನಿಗೆ ಹಲ್ಲೆ ಮಾಡುವ ದ್ರಶ್ಯ ಇಲ್ಲ ಎಂದರೆ ನಿಜ. ಸದರಿ ದ್ರಶ್ಯಾವಳಿಯಲ್ಲಿ 1 ನೇ ಆರೋಪಿ ಕಾಲರ್ ನ್ನು ಹಿಡಿದುಕೊಂಡು, ಶರ್ಟ್ ನ್ನು ಹಿಡಿದು ಎಳೆದುಕೊಂಡು ಹೋಗಿದ್ದು ಇಲ್ಲ ಎಂದರೆ, ಶರ್ಟ್ ನ್ನು ಹಿಡಿದು ಎಳೆದುಕೊಂಡು ಹೋಗಿದ್ದು ಇಲ್ಲ. ಎಂಒ-1 ರ ದ್ರಶ್ಯಾವಳಿಯಲ್ಲಿ ಆರೋಪಿತರು ಅಂಗಡಿಯಿಂದ ಹೊರಗೆ ಹೋಗಿದ್ದು ಕಾಣುವುದಿಲ್ಲ ಎಂದರೆ, ನಾನು ಆ ದ್ರಶ್ಯವನ್ನು ಗಮನಿಸಿಲ್ಲ. ಚಾಸಾ-1 ಈತನಿಗೆ ಬೀಚ್ ನಲ್ಲಿ ಹಲ್ಲೆಯಾಗಿದ್ದ ಬಗ್ಗೆ ನನಗೆ ಬೇರೆಯವರಿಂದ ಕೇಳಿ ತಿಳಿದಿತ್ತು. ಆದಿನ ಆರೋಪಿತರು ಅಲ್ಲಿಂದ ಎಲ್ಲಿಗೆ, ಹೇಗೆ ಹೋದರು ಎಂದು ಗೊತ್ತಿಲ್ಲ. ಆದಿನ ಆರೋಪಿತರು ಮತ್ತು ಚಾಸಾ-1 ಆದಿನ ಯಾವ ವಾಹನದಲ್ಲಿ ಹೋಗಿದ್ದರು ಎಂದು ಗೊತ್ತಿಲ್ಲ. ಎಂಒ-1 ರ ಸಿಡಿಯನ್ನು ನಾನೇ ಪೊಲೀಸರಿಗೆ ಕೊಟ್ಟಿದ್ದೆ. ದ್ರಶ್ಯಾವಳಿಗಳನ್ನು ನಾನೇ ನನ್ನ ಲ್ಯಾಪ್ ಟಾಪ್ ಮೂಲಕ ಸಿಡಿಗೆ ಹಾಕಿದ್ದೆ. ಆ ದ್ರಶ್ಯಾವಳಿಗಳನ್ನು ಯಾವ ದಿನ ಡೌನ್ ಲೋಡ್ ಮಾಡಿದ್ದು ಎಂದು ಈಗ ನೆನಪಿಲ್ಲ.

2) ನಿಪಿ-13 ರ ಪತ್ರವನ್ನು ಎಲ್ಲಿ ಪ್ರಿಂಟ್ ತೆಗೆದಿತ್ತು ಎಂದು ಈಗ ನೆನಪಿಲ್ಲ. ನಿಪಿ -13 ರಲ್ಲಿ ಇರುವ ವಿವರಗಳನ್ನು ಪೊಲೀಸರೇ ಹಾಕಿ ತೆಗೆದಿದ್ದರು ಎಂದರೆ ಗೊತ್ತಿಲ್ಲ. ಆದಿನ ನನ್ನ ಅಂಗಡಿಯ ಒಳಗೆ ಮತ್ತು ಹೊರಗೆ ಎಷ್ಟು ಜನರು ಇದ್ದರು ಎಂದು ಈಗ ನೆನಪಿಲ್ಲ. ಚಾಸಾ-1, ಯಾವ ಸಮಯಕ್ಕೆ ಬಂದಿದ್ದನು ಎಂದು ಗೊತ್ತಿಲ್ಲ, ಆತ ಅಂಗಡಿಯ ಒಳಗೆ ಬಂದಾಗ ತಿಳಿದಿತ್ತು. ಆತ ಬಂದ ಕೆಲಸ ಸಮಯದಲ್ಲಿ ಗಲಾಟೆ ಆರಂಭವಾಗಿತ್ತು. ಆದಿನ ಅಲ್ಲಿ ಗಲಾಟೆ ಸುಮಾರು 5 ನಿಮಿಷ ನಡೆದಿತ್ತು. ಚಾಸಾ-1 ಈತನಿಗೆ ಹಂಪನಕಟ್ಟೆ ಬಳಿ ಹಲ್ಲೆ ಮಾಡಿದ್ದರು ಎಂದು ಬೇರೆಯವರಿಂದ ಕೇಳಿ ತಿಳಿದಿತ್ತು.

3) ಎಂಒ-1 ಯಾವ ಕಂಪೆನಿಯದ್ದು ಎಂದು ಗೊತ್ತಿಲ್ಲ. ನಾನು ಡಿ.ವೈ,.ಎಸ್ಪಿ ಕಚೇರಿಗೆ ಹೋದಾಗ ಸಮಯ ಎಷ್ಟು ಎಂದು ಈಗ ನೆನಪಿಲ್ಲ. ನಾನು ಅಲ್ಲಿ ಸುಮಾರು ಅರ್ಧ ಗಂಟೆ ಇರಬಹುದು. ಆದಿನ ನನ್ನ ಅಂಗಡಿಯಲ್ಲಿ ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ. ಈದಿನ ನೋಡಿ ಹೇಳಿದ, ಎಂಒ-1 ರ ದೃಶ್ಯಾವಳಿಗಳು ನನ್ನ ಅಂಗಡಿಯದ್ದು ಅಲ್ಲ ಎಂದರೆ ಸರಿಯಲ್ಲ. ಚಾಸಾ-1, ನನಗೆ ಬೇಕಾದವರೆಂದು, ಅವರು ಹಾಕಿದ ದೂರಿಗಾಗಿ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ-31 ಇವರ ಕಚೇರಿಯಲ್ಲಿ ಯಾವುದೇ ದಾಖಲೆ ಮತ್ತು ಮಾಹಿತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ -**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್.ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.